ಆರ್‌ಬಿಐ/2008–09/ 186 ಸೆಪ್ಟೆಂಬರ್ 19, 2008
ಡಿಬಿಒಡಿ.ಸಂ. ಎಲ್‌ಇಜಿ.ಬಿಸಿ. 47/09.07.005/2008–09

ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು
(ಅರ್‌ಆರ್‌ಬಿಗಳನ್ನು ಹೊರತುಪಡಿಸಿ)

ಮಾನ್ಯರೆ,

**ಬ್ಯಾಂಕುಗಳಿಂದ ಸ್ಥಗಿತಗೊಳಿಸಲ್ಪಟ್ಟ ಖಾತೆಗಳ ಬಡ್ಡಿ ಪಾವತಿ**

ಜಾರಿ ಪ್ರಾಧಿಕಾರದ ಆದೇಶವನ್ನು ಆಧರಿಸಿ, ಕೆಲವು ಸಂದರ್ಭಗಳಲ್ಲಿ ಗ್ರಾಹಕರ ಖಾತೆಗಳನ್ನು ಬ್ಯಾಂಕುಗಳು ಸ್ಥಗಿತಗೊಳಿಸಬೇಕಾಗುವ ವಿಚಾರ ಬ್ಯಾಂಕುಗಳಿಗೆ ತಿಳಿದಿರುವ ಸಂಗತಿಯೇ ಆಗಿದೆ. ಈ ರೀತಿ ಸ್ಥಗಿತಗೊಳಿಸಲ್ಪಟ್ಟ ಖಾತೆಗಳ ಮೇಲೆ ಬಡ್ಡಿ ಪಾವತಿಸುವ ವಿಷಯದ ಬಗ್ಗೆ ಗಮನಸೆಳೆಯಲಾಗಿದೆ.

2. ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಶನ್‌ನೊಂದಿಗೆ ಸಮಾಲೋಚಿಸಿ ಈ ವಿಷಯವನ್ನು ಪರಿಶೀಲಿಸಲಾಗಿದೆ ಮತ್ತು ಜಾರಿ ಪ್ರಾಧಿಕಾರದಿಂದ ಸ್ಥಗಿತಗೊಳಿಸಲ್ಪಟ್ಟ ಅವಧಿ–ಠೇವಣಿ ಖಾತೆಗಳಿಗೆ ಸಂಬಂಧಪಟ್ಟಂತೆ ಈ ಕೆಳಗಿನ ಪ್ರಕ್ರಿಯೆಗಳನ್ನು ಅನುಸರಿಸಲು ಬ್ಯಾಂಕುಗಳಿಗೆ ಸಲಹೆ ನೀಡಲಾಗಿದೆ:

(i) ವಾಯಿದೆ ಪೂರ್ತಿಯಾದಾಗ ಗ್ರಾಹಕನಿಂದ, ಮೂಲ ಅವಧಿಗೆ ಸಮನಾದ ಅವಧಿಗೆ ನವೀಕರಣಕ್ಕಾಗಿ ಕೋರಿಕೆಪತ್ರವನ್ನು ಪಡೆಯಬಹುದು.

(ii) ಹೊಸ ರಸೀದಿಯನ್ನು ನೀಡಬೇಕಾದ ಅಗತ್ಯವಿಲ್ಲ. ಆದರೆ, ನವೀಕರಣವಾದ ಬಗ್ಗೆ ಠೇವಣಿ ಲೆಜ್ಜರ್‌ನಲ್ಲಿ ಸೂಕ್ತ ಟಿಪ್ಪಣಿಯನ್ನು ಮಾಡಬಹುದು.

(iii) ಠೇವಣಿ ನವೀಕರಿಸಿದ ಬಗ್ಗೆ ಠೇವಣಿದಾರನಿಗೆ ಸೂಚನೆಯೊಂದಿಗೆ ಸಂಬಂಧಿಸಿದ ಸರಕಾರಿ ಇಲಾಖೆಗೆ, ರೆಜಿಸ್ಟರ್ಡ್ ಪತ್ರ/ ತ್ವರಿತ ಅಂಚೆ/ ಕೊರಿಯರ್ ಸೇವೆ ಮೂಲಕ ಸೂಚನೆಯನ್ನು ನೀಡಬಹುದು. ಠೇವಣಿದಾರನ ಸೂಚನೆಯಲ್ಲಿ ಠೇವಣಿಯನ್ನು ನವೀಕರಿಸಿದಾಗ ಅನ್ವಯಿಸಿದ ಬಡ್ಡಿ ದರವನ್ನು ಉಲ್ಲೇಖಿಸಬೇಕಾಗುತ್ತದೆ

(iv) ಪಕ್ವತಾ ದಿನದಿಂದ 14ದಿನಗಳೊಳಗೆ ನವೀಕರಣಕ್ಕಾಗಿ ಕೋರಿಕೆಪತ್ರವನ್ನು ಸ್ವೀಕರಿಸಿದಲ್ಲಿ, ಪಕ್ವತಾ ದಿನಾಂಕದಿಂದಲೇ ನವೀಕರಣ ಮಾಡಬಹುದಾಗಿದೆ. ಇದು 14ದಿನ ಮೀರಿದಲ್ಲಿ, ಬ್ಯಾಂಕುಗಳು ತಮ್ಮ ನೀತಿಗನುಸಾರವಾಗಿ ಪಕ್ವತಾದಿನಾಂಕ ಮೀರಿದ ಅವಧಿಗೆ ಬಡ್ಡಿ ನೀಡಬಹುದು ಮತ್ತು ಇದನ್ನು ಬಡ್ಡಿರಹಿತ ಉಪಖಾತೆಯಲ್ಲಿಟ್ಟು ಮೂಲ ಠೇವಣಿ ಜೊತೆ ಬಿಡುಗಡೆ ಮಾಡಬಹುದು.

3. ಮುಂದುವರಿದು, ಜಾರಿ ಪ್ರಾಧಿಕಾರದವರು ಸ್ಥಗಿತಗೊಳಿಸಿದ ಉಳಿತಾಯ ಖಾತೆಗಳಿಗೆ ಸಂಬಂಧಿಸಿದಂತೆ, ಬ್ಯಾಂಕುಗಳು ಬಡ್ಡಿಯನ್ನು ಖಾತೆಗೆ ನಿಯತವಾಗಿ ಜಮಾ ಮಾಡುವುದನ್ನು ಮುಂದುವರಿಸಬಹುದು.

ತಮ್ಮ ವಿಶ್ವಾಸಿ,

(ಪ್ರಶಾಂತ್ ಸರನ್)
ಪ್ರಭಾರಿ ಮುಖ್ಯ ಮಹಾ ವ್ಯವಸ್ಥಾಪಕರು.